# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583105.

**ಕುಲಸಚಿವರು (ಮೌಲ್ಯಮಾಪನ)** | **ದೂರವಾಣಿ:** 08392-241011


ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸುತ್ತೋಲೆ/2018-19/2504 ದಿನಾಂಕ: 17.09.2018

## ಸುತ್ತೋಲೆ

ಈ ಸುತ್ತೋಲೆ ಮೂಲಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಮಹಾವಿದ್ಯಾಲಯದ ಪ್ರಾಂಶುಪಾಲರುಗಳ ಹಾಗೂ ಬಿ.ಓ.ಇ ಅಧ್ಯಕ್ಷರುಗಳ ಗಮನಕ್ಕೆ ತರಬಯಸುವುದೇನೆಂದರೆ, ನವೆಂಬರ್/ಡಿಸೆಂಬರ್-2018ರ ತಿಂಗಳಿನಲ್ಲಿ ಜರುಗಲಿರುವ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಪದವಿ ಪರೀಕ್ಷೆಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ (www.vskub.ac.in) ನಲ್ಲಿ ಪ್ರಕಟಿಸಲಾಗಿದೆ. ಸದರಿ ವೇಳಾಪಟ್ಟಿಯಲ್ಲಿ ಯಾವುದೇ ವಿಷಯದ ಪತ್ರಿಕೆ ಸೇರ್ಪಡೆಯಾಗದಿದ್ದಲ್ಲಿ, ಯಾವುದೇ ವಿದ್ಯಾರ್ಥಿ ಒಂದೇ ಸಮಯದಲ್ಲಿ ಎರಡು ಪತ್ರಿಕೆಗಳನ್ನು ಬರೆಯಬೇಕಾಗಿದ್ದಲ್ಲಿ ಮತ್ತು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಗಳು ಪರೀಕ್ಷಾ ದಿನಾಂಕದಂದು ಇದ್ದಲ್ಲಿ ವಿಶ್ವವಿದ್ಯಾಲಯಕ್ಕೆ ದಿನಾಂಕ: 06.10.2018ರ ಒಳಗಾಗಿ ತಿಳಿಸಲು ಸೂಚಿಸಲಾಗಿದೆ. ತದ ನಂತರ ಬಂದ ಅಹವಾಲುಗಳನ್ನು ಸ್ವೀಕರಿಸಲಾಗುವುದಿಲ್ಲ.

**ವಿಶೇಷ ಸೂಚನೆ:**

1. ಕರ್ನಾಟಕ ಸಾರ್ವತ್ರಿಕ ಚುನಾವಣಾ ಪ್ರಕ್ರಿಯೆಗಳು ಇರುವ ಸಮಯದಲ್ಲಿ ಪರೀಕ್ಷಾ ದಿನಾಂಕಗಳಲ್ಲಿ ಬದಲಾವಣೆ ಮಾಡುವ ಅನಿವಾರ್ಯತೆ ಇರುತ್ತದೆ.
2. ಸದರಿ ಪರೀಕ್ಷೆಗಳು ಜರುಗಲಿರುವ ದಿವಸಗಳಂದು ರಾಜ್ಯಮಟ್ಟದ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಸ್ಟ್ರೈಕ್‌ಗಳು ಇದ್ದಲ್ಲಿ ಮಾತ್ರ ಸದರಿ ದಿನದಂದು ಜರುಗಲಿರುವ ಪರೀಕ್ಷೆಗಳನ್ನು ಮಾತ್ರ ಇನ್ನೊಂದು ದಿನದಂದು ನಡೆಸಲು ಕ್ರಮ ಕೈಗೊಳ್ಳಲಾಗುವುದು. ಅದರ ಹೊರತಾಗಿ ಬೇರೆ ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳನ್ನು ಮುಂದೂಡಲು ಅವಕಾಶವಿರುವುದಿಲ್ಲ.
3. ಸ್ಪರ್ಧಾತ್ಮಕ ಪರೀಕ್ಷೆಗಳು ಜರುಗಲಿರುವ ಹಿಂದಿನ ಮತ್ತು ಮುಂದಿನ ದಿನದಂದು ಪರೀಕ್ಷೆಗಳಿದ್ದು, ಅದರ ಬದಲಾವಣೆಗೆ ಸಲ್ಲಿಸುವ ಮನವಿಯನ್ನು ಪರಿಗಣಿಸಲಾಗುವುದಿಲ್ಲ.
4. ಪುನರಾವರ್ತಿತ ಅಭ್ಯರ್ಥಿಗಳಿಗೆ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಪತ್ರಿಕೆಗಳಿದ್ದು, ಅದರ ಬದಲಾವಣೆಗೆ ಸಲ್ಲಿಸುವ ಮನವಿಯನ್ನು ಪರಿಗಣಿಸಲಾಗುವುದಿಲ್ಲ.

17/9/18

ಕುಲಸಚಿವರು (ಮೌಲ್ಯಮಾಪನ)
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
2. ಕುಲಸಚಿವರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
3. ಮುಖ್ಯಸ್ಥರು, ಬಿ.ಓ.ಇ ಎಲ್ಲಾ ಸ್ನಾತಕ ಪದವಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
4. ಪ್ರಾಂಶುಪಾಲರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಎಲ್ಲಾ ಮಹಾವಿದ್ಯಾಲಯಗಳು.